FEES, RESERVATION, ADMISSION POLICY

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/472/ಎಸಿಎಂ(2)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:07-06-2019.

## -::: ಸುತ್ತೋಲೆ :::-

ವಿಷಯ: ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಕೋರ್ಸಿಗೆ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಸರ್ಕಾರದ ಆದೇಶಗಳ ಪ್ರಕಾರ ಪಾವತಿಸಬೇಕಾಗಿರುವ ಶುಲ್ಕಗಳ ವಿವರ.

-00000-

2019-20ನೇ ಸಾಲಿನಲ್ಲಿ ರಾಜ್ಯದ 25 "ನೋಡಲ್ ಸೆಂಟರ್" ಗಳಲ್ಲಿ ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಮೂಲಕ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಈ ಕೆಳಕಂಡ ವರ್ಗಗಳ ಅಡಿಯಲ್ಲಿ ಸರ್ಕಾರಿ ಆದೇಶಗಳಂತೆ ಅವರುಗಳ ಕುಟುಂಬದ ವಾರ್ಷಿಕ ವರಮಾನ / ಆದಾಯ ಗಳಂತೆ ಬೋಧನಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಪಾವತಿಸಲು ಶುಲ್ಕ ವಿನಾಯಿತಿಗೆ ಅರ್ಹರಿರುತ್ತಾರೆ. ಪ್ರಯುಕ್ತ, ಸೀಟು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳಿಗೆ ಪ್ರವೇಶ ಸಮಯದಲ್ಲಿ ಈ ಕೆಳಕಂಡಂತೆ ಶುಲ್ಕಗಳನ್ನು ಮಾತ್ರ ಪಾವತಿಸಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

| ಕ್ರ. ಸಂ. | ವರ್ಗ | ಪೋಷಕರ ವಾರ್ಷಿಕ ಆದಾಯ ಮಿತಿ | ಸರ್ಕಾರದ ಆದೇಶಗಳ ಪ್ರಕಾರ ಪಾವತಿಸಬೇಕಾಗಿರುವ ಶುಲ್ಕಗಳ ವಿವರ | | |
|---|---|---|---|---|---|
| | | | ಸರ್ಕಾರಿ ಪಾಲಿಟೆಕ್ನಿಕ್ ಕೋರ್ಸುಗಳಿಗೆ | ಅನುದಾನಿತ ಪಾಲಿಟೆಕ್ನಿಕ್ (ಅನುದಾನಿತ ಕೋರ್ಸುಗಳಿಗೆ) | ಖಾಸಗಿ / ಅನುದಾನಿತ ಪಾಲಿಟೆಕ್ನಿಕ್ (ಅನುದಾನರಹಿತ ಕೋರ್ಸುಗಳಿಗೆ) |
| 01. | ಸಾಮಾನ್ಯ | -- | ₹ 4,270/- | ₹ 6,948/- | ₹ 13,405/- |
| | | ಸರ್ಕಾರದ ಆದೇಶ ಸಂಖ್ಯೆ. ಇಡಿ 119 ಟಿಪಿಇ 2005, ದಿನಾಂಕ:18-10-2005 ಮತ್ತು ಸರ್ಕಾರದ ಆದೇಶ ಸಂಖ್ಯೆ. ಇಡಿ 10 ಟಿಪಿಇ 2012, ದಿನಾಂಕ:29-05-2013, ಇಡಿ 64 ಟಿಪಿಇ 2016, ದಿನಾಂಕ:21-06-2016 ಹಾಗೂ ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30-06-2018 (ಬೋಧನಾ ಶುಲ್ಕದಲ್ಲಿ ಶೇ.5ರಷ್ಟು ಹೆಚ್ಚಿಸಲು)ರನ್ವಯ ಶುಲ್ಕವನ್ನು ಪಾವತಿ ಮಾಡಬೇಕಾಗಿರುತ್ತದೆ. | | | |
| 02. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ | ₹ 2.50 ಲಕ್ಷದವರೆಗೆ | ₹ 430/- | ₹ 430/- | -- |
| | | ಸರ್ಕಾರದ ಆದೇಶ ಸಂ. ಸಕಇ 178 ಪಕವಿ 2015, ದಿ:31-12-2015ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶುಲ್ಕ ಮಂಜೂರಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸಮಾಜ ಕಲ್ಯಾಣ ಇಲಾಖೆ ವೆಬ್‌ಸೈಟ್: www.sw.kar.nic.in ನಲ್ಲಿ ಅವಕಾಶ ಇರುತ್ತದೆ. | | | |
| | | ₹ 2.50 ದಿಂದ ₹ 10.00 ಲಕ್ಷದವರೆಗೆ | ₹ 2,535/- | ₹ 3,874/- | -- |
| | | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶುಲ್ಕ ಮಂಜೂರಾತಿಗೆ ಆಫ್‌ಲೈನ್ ಅರ್ಜಿ ಸಲ್ಲಿಕೆಗಾಗಿ ತಾಂತ್ರಿಕ ಶಿಕ್ಷಣ ಇಲಾಖೆ ವೆಬ್‌ಸೈಟ್ www.dte.kar.nic.in ನಲ್ಲಿ ಮಾಹಿತಿ ಪಡೆಯಬಹುದು. | | | |
| | ಹಿಂದುಳಿದ ವರ್ಗ: (ಅಲ್ಪಸಂಖ್ಯಾತ ವರ್ಗ ಹೊರತುಪಡಿಸಿ) | | | | |
| 03. | ಪ್ರವರ್ಗ-1 | ₹ 2.50 ಲಕ್ಷದವರೆಗೆ | ₹ 960/- | ₹ 3,638/- | -- |
| | | ಸರ್ಕಾರದ ಆದೇಶ ಸಂ. ಹಿಂವಇ 397 ಬಿಎಂಎಸ್ 2013, ದಿ:05-09-2013 ಮತ್ತು ಸರ್ಕಾರದ ಆದೇಶ ಸಂ. ಹಿಂವಕ 589 ಬಿಎಂಎಸ್ 2013, ದಿನಾಂಕ:05-10-2013 ಹಾಗೂ ಸರ್ಕಾರದ ತಿದ್ದುಪಡಿ ಮತ್ತು ಸೇರ್ಪಡೆ ಆದೇಶ ಸಂ. ಹಿಂವಕ 589 ಬಿಎಂಎಸ್ 2013, ದಿನಾಂಕ:06-08-2014 ರಂತೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ವೆಬ್‌ಸೈಟ್ ಶುಲ್ಕ ಮಂಜೂರಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವೆಬ್‌ಸೈಟ್: https://karepass.cgg.gov.in/ ನಲ್ಲಿ ಅವಕಾಶ ಇರುತ್ತದೆ. | | | |

| | | | | | |
|---|---|---|---|---|---|
| 04. | 2ಎ / 3ಎ / 3ಬಿ | ₹ 1.00 ಲಕ್ಷದವರೆಗೆ | ₹ 960/- | ₹ 3,638/- | -- |
| | | ಹಿಂದುಳಿದ ವರ್ಗದ ವಿದ್ಯಾರ್ಥಿಗಳು ವೆಬ್‌ಸೈಟ್ ಶುಲ್ಕ ಮಂಜೂರಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವೆಬ್‌ಸೈಟ್: https://karepass.cgg.gov.in/ ನಲ್ಲಿ ಅವಕಾಶ ಇರುತ್ತದೆ. | | | |
| ಅಲ್ಪಸಂಖ್ಯಾತ ವರ್ಗ:<br>(ಹಿಂದುಳಿದ ವರ್ಗ ಹೊರತುಪಡಿಸಿ) | | | | | |
| 05. | ಪ್ರವರ್ಗ-1ರಲ್ಲಿ ಬರುವ (ನಧಾಫ್, ಪಿಂಜಾರ, ದರವೇಶ್, ಚಪ್ಪರಬಂದ್, ಕಸಾಬ, ಪೂಲ್‌ಮಾಲಿ(ಮುಸ್ಲಿಂ) | ₹ 1.00 ಲಕ್ಷದವರೆಗೆ | ₹ 4,270/- | ₹ 6,948/- | ₹ 13,405/- |
| 06. | ಪ್ರವರ್ಗ2ಎ-ಭೌದ್ಧ ಸಮುದಾಯ<br>ಪ್ರವರ್ಗ2ಬಿ-ಮುಸ್ಲಿಂ ಸಮುದಾಯ<br>ಪ್ರವರ್ಗ3ಬಿ-ಕ್ರಿಶ್ಚಿಯನ್, ಜೈನ್, ಪಾರ್ಸಿ, ಸಿಖ್ ಸಮುದಾಯ | ₹ 1.00 ಲಕ್ಷದವರೆಗೆ | ₹ 4,270/- | ₹ 6,948/- | ₹ 13,405 |
| ಸರ್ಕಾರದ ಆದೇಶ ಸಂಖ್ಯೆ ಎಂಡಬ್ಲ್ಯೂಡಿ 400 ಎಂಡಿಎಸ್ 2014, ದಿನಾಂಕ 17.10.2014 & ಎಂಡಬ್ಲ್ಯೂಡಿ 21 ಎಂಡಿಎಸ್ 2011, ದಿನಾಂಕ: 02.08.2014ರಂತೆ ಅಭ್ಯರ್ಥಿಗಳ ಪೋಷಕರ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ.1.00 ಲಕ್ಷದ ಮಿತಿಯೊಳಗಿದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಪ್ರಥಮ/ದ್ವಿತೀಯ/ತೃತೀಯ ಡಿಪ್ಲೋಮಾ ಪ್ರವೇಶದ ಸಮಯದಲ್ಲಿ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಇರುವಂತೆ ಶುಲ್ಕ ವಿನಾಯಿತಿ ಇರುವುದಿಲ್ಲ. ಆದ್ದರಿಂದ, ನಿಗಧಿಪಡಿಸಿದ ಪೂರ್ಣ ಪ್ರವೇಶ ಶುಲ್ಕವನ್ನು ಪಾವತಿಸಿ, ನಂತರ ಶುಲ್ಕ ಮರುಪಾವತಿಗಾಗಿ ಆನ್‌ಲೈನ್ ಮುಖಾಂತರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.gokdom.kar.nic.in or ಭಾರತ ಸರ್ಕಾರದ https://scholarships.gov.in/ ನಲ್ಲಿ ಅರ್ಜಿ ಸಲ್ಲಿಸಿ, ಶುಲ್ಕ ಮರುಪಾವತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಆದೇಶದಂತೆ ವಿದ್ಯಾರ್ಥಿಗಳು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಶೇಕಡಾ 50 ಅಥವಾ 50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ ₹ 3,000/-ಗಳಷ್ಟು ಮೊತ್ತದ ಶುಲ್ಕ ಮರುಪಾವತಿ ನೀಡಲು ಅವಕಾಶವಿದೆ. | | | | | |
| 06. | ಎಸ್.ಎನ್.ಕ್ಯೂ (SNQ) | ₹ 1.00 ಲಕ್ಷದಿಂದ ₹ 8.00 ಲಕ್ಷದವರೆಗೆ | ₹ 1,330/- | ₹ 1,330/- | ₹ 1,330/- |
| | | ಸರ್ಕಾರಿ ಆದೇಶ ಸಂ. ಇಡಿ 72 ಟಿಇಸಿ 2013, ಬೆಂಗಳೂರು, ದಿನಾಂಕ: 23ನೇ ಮೇ 2014 ಹಾಗೂ ಸರ್ಕಾರಿ ಆದೇಶ ಸಂ. ಇಡಿ 10 ಟಿಇಸಿ 2019, ಬೆಂಗಳೂರು, ದಿನಾಂಕ: 30ನೇ ಮೇ 2019 ರನ್ವಯ ಶುಲ್ಕವನ್ನು ಪಾವತಿ ಮಾಡಬೇಕಾಗಿರುತ್ತದೆ. | | | |

ಸರ್ಕಾರದ ಆದೇಶಗಳಲ್ಲಿನ ಸೂಚನೆಗಳ ಪ್ರಕಾರ ಸೀಟು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳಿಂದ ಪ್ರವೇಶ ಸಮಯದಲ್ಲಿ ವಸೂಲಿ ಮಾಡತಕ್ಕದ್ದು. ಮೇಲ್ಕಂಡಂತೆ ಕೂಡಲೇ ಕ್ರಮಕೈಗೊಂಡು ಈ ಬಗ್ಗೆ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಹಾಗೂ ಪೋಷಕರುಗಳ ಗಮನಕ್ಕೆ ತರುವುದು.

ನಿರ್ದೇಶಕರು

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ – ಸೂಕ್ತ ಕ್ರಮಕ್ಕಾಗಿ ಹಾಗೂ ಅನುಸರಣೆಗಾಗಿ

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/08/ಎಸಿಎಂ(2)/2019-20

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು - 560001,
ದಿನಾಂಕ:02-05-2019.

## -:: ಸುತ್ತೋಲೆ ::-

**ವಿಷಯ:** 2019-20ನೇ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಸ್ಥೆಗಳು / ಆಡಳಿತ ಮಂಡಳಿಯವರು ಸೀಟುಗಳನ್ನು ಸ್ವ-ಇಚ್ಛೆಯಿಂದ ಸರ್ಕಾರಕ್ಕೆ ಅಧ್ಯಾರ್ಪಣೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂ. ಇಡಿ 207 ಟಿಜಿಎಲ್ 2016, ದಿ:20-03-2017.
2. ಸರ್ಕಾರದ ಆದೇಶ ಸಂ: ಇಡಿ 66 ಟಿಪಿಇ 2012, ದಿ:05-05-2012.

-0000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019-20ನೇ ಸಾಲಿನ ಸರ್ಕಾರಿ / ಅನುದಾನಿತ ಹಾಗೂ ಸ್ವ-ಇಚ್ಛೆಯಿಂದ ಸರ್ಕಾರಕ್ಕೆ ಸೀಟುಗಳನ್ನು ಅಧ್ಯಾರ್ಪಣೆ ಮಾಡುವ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಾತಿಯನ್ನು "ಆನ್‌ಲೈನ್ ಇಂಟರಾಕ್ಟೀವ್" ಕೌನ್ಸಲಿಂಗ್ ಮೂಲಕ ನಿಗಧಿಪಡಿಸಿರುವ ನೋಡಲ್ ಸೆಂಟರ್‌ಗಳಲ್ಲಿ ಉಲ್ಲೇಖ(1)ರ ಸರ್ಕಾರದ ಆದೇಶದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ನಡೆಸಬೇಕಾಗಿರುತ್ತದೆ. ಅಭ್ಯರ್ಥಿಗಳು ರಾಜ್ಯದ 25 "ನೋಡಲ್ ಕೇಂದ್ರ" (Nodal Center) ಗಳ ಮೂಲಕ ಸೀಟು ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ತಮ್ಮ ಇಚ್ಛೆಗೆ ಅನುಗುಣವಾಗಿ ರಾಜ್ಯದ ಯಾವುದೇ ಪಾಲಿಟೆಕ್ನಿಕ್ ಮತ್ತು ಕೋರ್ಸನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ.

ಮುಂದುವರೆದಂತೆ, ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಸ್ಥೆಗಳು ಸೀಟುಗಳನ್ನು ಸ್ವ-ಇಚ್ಛೆಯಿಂದ ಪ್ರವೇಶ ಪ್ರಕ್ರಿಯೆಗೆ ಮುನ್ನ ಸರ್ಕಾರಕ್ಕೆ ಬಿಟ್ಟುಕೊಟ್ಟಲ್ಲಿ ಅಂತಹ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಪ್ರವೇಶಾತಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಪ್ರಯುಕ್ತ, ಪ್ರವೇಶ ಬಯಸುವ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಸ್ಥೆಗಳು / ಆಡಳಿತ ಮಂಡಳಿಯವರು ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ, ಸೀಟುಗಳನ್ನು ಸ್ವ-ಇಚ್ಛೆಯಿಂದ ಸರ್ಕಾರಕ್ಕೆ ಅಧ್ಯಾರ್ಪಣೆ ಮಾಡುವ ನಿಟ್ಟಿನಲ್ಲಿ ಈ ಸುತ್ತೋಲೆಗೆ ಲಗತ್ತಿಸಿರುವ ಷರತ್ತುಗಳನ್ನು ಒಪ್ಪಿ ಅಥವಾ ಒಪ್ಪಂದ ವ್ಯವಸ್ಥೆಗೆ ₹ 100/-ರ ಛಾಪ ಕಾಗದಲ್ಲಿ ಅಫಿಡವಿಟ್ (Affidavit) ಮೂಲಕ ಶಿಕ್ಷಣ ಸಂಸ್ಥೆ ಅಥವಾ ಸಂಘದವರು ತಮ್ಮ ಒಪ್ಪಿಗೆಯನ್ನು ನೀಡಲು ತಿಳಿಸಲಾಗಿದೆ. ಸಂಸ್ಥೆಯವರು **2019-20ನೇ ಸಾಲಿನ ಎ.ಐ.ಸಿ.ಟಿ.ಇ, ನವದೆಹಲಿ ಇವರಿಂದ ಮುಂದುವರೆಸಿರುವ ಮಾನ್ಯತೆ ಪತ್ರ ಹಾಗೂ ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಕೋರ್ಸುಗಳ ಇಂಟೇಕ್ ವಿವರವನ್ನು ಎಸ್.ಎನ್.ಕ್ಯೂ (SNQ) ಕೋಟಾದಡಿ ಸೀಟು ಹಂಚಿಕೆ ಮಾಡಲು ಖುದ್ದಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲು ತಿಳಿಸಲಾಗಿದೆ.**

ಈಗಾಗಲೇ 2019-20ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಯ ಕಾರ್ಯಗಳು ಪ್ರಾರಂಭವಾಗುತ್ತಿರುವುದರಿಂದ ಸಂಬಂಧಪಟ್ಟ ಪಾಲಿಟೆಕ್ನಿಕ್ ಸಂಸ್ಥೆಯವರು ತಮ್ಮ ಒಪ್ಪಿಗೆಯನ್ನು ದಿ:18-05-2019ರೊಳಗಾಗಿ ಸಹಾಯಕ ನಿರ್ದೇಶಕರು(ಎಂಪಿಸಿ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು - 560001 ಇವರಿಗೆ ಖುದ್ದಾಗಿ (ಮುದ್ದಾಂ) ಹಾಗೂ ನಿರ್ದೇಶನಾಲಯದ ಇ-ಮೇಲ್ **acm.dte@karnataka.gov.in** ಗೆ ಕೂಡಲೇ ಕಳುಹಿಸುವಂತೆ ತಿಳಿಸಲಾಗಿದೆ.

**ವಿ.ಸೂ:- ನಿಗಧಿತ ದಿನಾಂಕ:18-05-2019ರ ಸಂಜೆ 5.00ಗಂಟೆಗೆಯೊಳಗೆ ನಿರ್ದೇಶನಾಲಯಕ್ಕೆ ಮುದ್ದಾಂ ಮೂಲಕ ಕಳುಹಿಸಬೇಕು. ತದನಂತರ ಬಂದ ಒಪ್ಪಿಗೆ ಪತ್ರವನ್ನು ಪರಿಗಣಿಸಲಾಗುವುದಿಲ್ಲ.**

ನಿರ್ದೇಶಕರು

ಗೆ,

1. ರಾಜ್ಯದ ಎಲ್ಲಾ ಅನುದಾನಿತ/ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ.
2. ಅಧ್ಯಕ್ಷರು, ಕರ್ನಾಟಕ ಪ್ರೈವೇಟ್ ಪಾಲಿಟೆಕ್ನಿಕ್‌ಗಳ ಅಸೋಸಿಯೇಷನ್(ರಿ), ಬೆಂಗಳೂರು.

ಪ್ರತಿ:-

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ,
4. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
5. ನಿರ್ದೇಶಕರ ಆಪ್ತಶಾಖೆಗೆ.
6. ಸಂಯೋಜನಾಧಿಕಾರಿಗಳು, ತಾಂ.ಶಿ.ನಿ, (ಈ ಸುತ್ತೋಲೆಯನ್ನು ನಿರ್ದೇಶನಾಲಯದ ಅಂತರ್ ಜಾಲದಲ್ಲಿ (ವೆಬ್‌ಸೈಟ್) ಪ್ರಚುರಪಡಿಸುವುದು).
7. ಕಛೇರಿ ಪ್ರತಿ.

**2019–20ನೇ ಶೈಕ್ಷಣಿಕ ಸಾಲಿನಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಮೂಲಕ ಪ್ರಥಮ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳ ಆಯ್ಕೆ ಬಗ್ಗೆ**

**ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಒಪ್ಪಿಗೆ ಪತ್ರ**

**(ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಘ/ಸಂಸ್ಥೆಗಳಿಗೆ)**

2019–20ನೇ ಸಾಲಿನಿಂದ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಥಮ ಡಿಪ್ಲೋಮಾ ಪ್ರವೇಶಾತಿಯನ್ನು "ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್" ಮೂಲಕ ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ಸರ್ಕಾರ ನಿಗಧಿಪಡಿಸಿದ ಶುಲ್ಕ ಹಾಗೂ ಮೀಸಲಾತಿ ಪ್ರಕಾರ ಸೀಟು ಹಂಚಿಕೆಯ ಬಗ್ಗೆ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಸಮ್ಮತಿ ಸೂಚಿಸಲು ನನಗೆ / ನಮಗೆ / ಆಡಳಿತ ಮಂಡಳಿ ಅಧಿಕಾರವನ್ನು ನೀಡಿದೆ. ನೋಡಲ್ ಸೆಂಟರ್ ಮುಖಾಂತರ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದ ಅಭ್ಯರ್ಥಿಯು 03 ವರ್ಷಗಳ ಡಿಪ್ಲೋಮಾ ವ್ಯಾಸಂಗವನ್ನು ಪೂರ್ಣಗೊಳಿಸುವವರೆಗೂ ಸರ್ಕಾರವು ನಿಗಧಿಪಡಿಸಿದ ಶುಲ್ಕಕ್ಕಿಂತ ಹೆಚ್ಚುವರಿಯಾಗಿ ಯಾವುದೇ ರೀತಿಯ ಶುಲ್ಕವನ್ನು ಪಡೆಯುವುದಿಲ್ಲವೆಂದು ಒಪ್ಪಿರುತ್ತೇನೆ/ವೆ. ಒಂದು ವೇಳೆ ಹೆಚ್ಚುವರಿ ಶುಲ್ಕವನ್ನು ಪಡೆದದ್ದು ಅಭ್ಯರ್ಥಿಗಳು/ಪೋಷಕರುಗಳಿಂದ ದೂರುಗಳು ಬಂದಲ್ಲಿ, ಮುಂದಿನ ಶೈಕ್ಷಣಿಕ ಸಾಲಿಗೆ ಸ್ವ-ಇಚ್ಛೆಯಿಂದ ಸರ್ಕಾರಕ್ಕೆ ಬಿಟ್ಟು ಕೊಡುವ ಸೀಟುಗಳನ್ನು "ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್" ಮುಖಾಂತರ ತುಂಬಬಾರದೆಂದು ಈ ಮೂಲಕ ಒಪ್ಪಿರುತ್ತೇನೆ/ವೆ. ನಮ್ಮ ಪಾಲಿಟೆಕ್ನಿಕ್‌ಗಳ ಈ ಕೆಳಕಂಡ ಕೋರ್ಸುಗಳ ಪ್ರವೇಶವನ್ನು "ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್" ಕೌನ್ಸಲಿಂಗ್ ಮುಖಾಂತರ ತುಂಬಲು ಸರ್ಕಾರದ ಮೀಸಲಾತಿ ನಿಯಮಗಳು ಹಾಗೂ ಸರ್ಕಾರ ನಿಗಧಿಪಡಿಸಿದ ಶುಲ್ಕಕ್ಕೆ ಪೂರ್ಣವಾಗಿ ಒಪ್ಪಿರುತ್ತೇನೆ/ವೆ.

| ಕ್ರ.ಸಂ. | ಕೋರ್ಸು | ಒಟ್ಟು ಇಂಟೇಕ್ | ನೋಡಲ್ ಸೆಂಟರ್ ಮುಖಾಂತರ ತುಂಬುವ ಸೀಟುಗಳ ಸಂಖ್ಯೆ |
|---|---|---|---|
| | | | |
| | | | |

**ಶುಲ್ಕ ನಿಗಧಿ ಬಗ್ಗೆ:**

ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಟಿಪಿಇ 2005, ದಿನಾಂಕ 18/10/2005 ಮತ್ತು ಇಡಿ 10 ಟಿಪಿಇ 2012, ದಿ:20-05-2012 ಹಾಗೂ ಹಾಗೂ ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30-06-2018 ರನ್ವಯ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳಿಗೆ ಅನ್ವಯವಾಗುವಂತೆ ಕೆಳಕಂಡ ಶುಲ್ಕವನ್ನು ಪಡೆಯಲು ಒಪ್ಪಿರುತ್ತೇನೆ/ವೆ.

| ಖಾಸಗಿ ಪಾಲಿಟೆಕ್ನಿಕ್‌ಗೆ ಅನ್ವಯವಾಗುವಂತೆ | ಬೋಧನಾ ಶುಲ್ಕ | ಇತರೇ ಶುಲ್ಕ | ಅಭಿವೃದ್ಧಿ ಶುಲ್ಕ | ಒಟ್ಟು |
|---|---|---|---|---|
| ಅ)ಕರ್ನಾಟಕದ ಅಭ್ಯರ್ಥಿಗಳಿಗೆ – | ₹ 12,075/- | ₹ 500/- | ₹ 830/- | ₹ 13,405/- |

ಸರ್ಕಾರದ ನೀತಿ ನಿಯಮಗಳನ್ವಯ, ಸರ್ಕಾರದ ಆದೇಶಗಳಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಪ್ರವರ್ಗ-1 ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ / ಆದಾಯ ಎಲ್ಲಾ ಮೂಲಗಳಿಂದ ರೂ.2.50 ಲಕ್ಷ ಮಿತಿಯೊಳಗೆ, ಮತ್ತು 2-ಎ, 3-ಎ, 3-ಬಿ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ / ಆದಾಯ ಎಲ್ಲಾ ಮೂಲಗಳಿಂದ ರೂ.1.00 ಲಕ್ಷ ಮಿತಿಯೊಳಗೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳ ಬೋಧನಾ ಶುಲ್ಕವನ್ನು ಪ್ರವೇಶ ಸಮಯದಲ್ಲಿ ಪಡೆಯಲಾಗುವುದಿಲ್ಲ ಹಾಗೂ ನಿಯಮಾನುಸಾರ ಸಂಬಂಧಪಟ್ಟ ಪ್ರಾಧಿಕಾರದವತಿಯಿಂದ ಸದರಿ ವಿದ್ಯಾರ್ಥಿಗಳ ಶುಲ್ಕವನ್ನು ವಿನಾಯಿತಿ/ಮರುಪಾವತಿ ಮಾಡಿಕೊಳ್ಳಲು ಒಪ್ಪಿರುತ್ತೇನೆ/ವೆ.

ಸಹಿ..........................................

ಹೆಸರು.......................................

ಪದನಾಮ......................................

ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಯ / ಸಂಘದ ಹೆಸರು(ಮೊಹರಿನೊಂದಿಗೆ)

ಸ್ಥಳ:

ದಿನಾಂಕ: